ತಾರೀಖು 29ನೆ ಏಪ್ರೆಲ್ 1907.

ನಂ. ರೆ. 9596—ಲ್ಯಾ. ರೆ. 524-06-3, ಸನ್ 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಜೇಷ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ:—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ ಮೈಸೂರ ಮುನಿಸಿಪಾಲ್ಟಿಯವರಿಕ್ಕಾಗಿ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ಹುಣಸೂರು ಗುಂಪಿನ ತಾಲ್ಲೂಕುಗಳ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಿಗೆ ಸದರೀ ಜಮೀನನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ತಿಸ್ಪ್ರತ್ತು	ತಾಲ್ಲೂಕು.	ಹೋಬಳಿ.	ಗ್ರಾಮದ.	ಖಾತೇದಾರನ ಹೆಸರು.	ಸರ್ವೆ ನಂಬರು.	ಒಟ್ಟು ವಿಸ್ತೀರ್ಣ.	ಕಂದಾಯ.	ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ.	ಚತುರ್ಗಡಿ.			
									ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
						ಎ. ಗು.	ರೂ. ಆ.	ಎ. ಗು.				
ಮೈಸೂರು	ಹೆಗ್ಗಡದೇವನಕೋಟೆ	ಸರಗೂರು	ಸರಗೂರು ದಾಖಲೆ ಹೊಸಅಗ್ರಹಾರಹುಂಡಿ	ಶ್ರೀಗಿರಿ ಕೆಟ್ಟ ...	179	9 37	7 7	9 37	ಹುಣಸೂರು-ಬೆಗ್ಗೂರು ರಸ್ತೆ	ಖಾಲಿ	ಕರಿಯಪ್ಪಣಿ ಕೆಟ್ಟಿನ ಹೊಲ	ಹಳೇ ಗ್ರಾಮದ ನಿವೇಶನ

ತಾರೀಖು 6ನೆ ಮೇ 1907.

ನಂ. ರೆ. 9762—ಫಾ. 69-05—9, 1900ನೆ ಇಸವಿಯ 11ನೆ ನಂಬರು ಮೈಸೂರು ಫಾರೆಸ್ಟ್ ರೆಗ್ಯುಲೇಷನಿನ 17ನೆ ಪ್ರಕರಣದ ನಿಯಮಗಳನ್ನನುಸರಿಸಿ, ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು ಈ ಇಸ್ತಿಹಾರ್‌ನಾಮಗೆ ಲಗತ್ತಿರುವ ಷೆಡ್ಯೂಲ್ ಪಟ್ಟಿಯಲ್ಲಿ ಕಂಡ ಚತುರ್ಗಡಿಗಳುಳ್ಳ ವಿಸ್ತೀರ್ಣವನ್ನು ಸದರಿ ಇಸ್ತಿಹಾರ್‌ನಾಮೆಯ ಕೆಳಗೆ ವಿವರಿಸಿರುವ ಅಧಿಕಾರಗಳ ಚಲಾವಣೆಗೆ ಒಳಪಟ್ಟು 1907ನೆ ಇಸವಿಯ ಜುಲೈ 1ನೆ ತಾರೀಖಿನಿಂದ ಸ್ವೇಟು ಫಾರೆಸ್ಟ್ಸ್ ಯಾ ಸಂಸ್ಥಾನ ಜಂಗಲಿಯೆಂದು ಭಾವಿಸತಕ್ಕದ್ದೆಂದು ಹುಕುಂ ದಯಪಾಲಿಸಿರುತ್ತಾರೆ:—

ಷೆಡ್ಯೂಲ್

ತಿಸ್ಪ್ರತ್ತು.	ತಾಲ್ಲೂಕು ಹೋಬಳಿ ಗ್ರಾಮ.	ಸುಮಾರು ವಿಸ್ತೀರ್ಣ.	ತಾತ್ಕಾಲಿಕ ಹೆಸರು.	ಚತುರ್ಗಡಿಗಳು.
ಹಾನಗಲ್	ಅರಸೀಕೆರೆ ತಾಲ್ಲೂಕು.	5.77 ಚದರ ಮೈಲಿಗಳು.	ಚಾಕಾನಕಟ್ಟೆ	ಉತ್ತರಕ್ಕೆ.—ಶಂಕರನಹಳ್ಳಿ ಗ್ರಾಮದ ಸರ್ವೆ 7ನೆ ನಂಬರಿನ ಆಗ್ನೇಯ ಮೂಲೆ (ವೈರಾಪುರ, ಶಂಕರನಹಳ್ಳಿ ಮತ್ತು ಹಳ್ಳಿತಿಮ್ಮನಹಳ್ಳಿ ಗ್ರಾಮಗಳ ಮುಕ್ತಪ್ಪೆ) ಯಿಂದ ಹೊರಟು ವೀರಯ್ಯ ರೇಬೆಯ ಆಗ್ನೇಯಕ್ಕೆ ಹಳ್ಳಿ ತಿಮ್ಮನಹಳ್ಳಿ ಗ್ರಾಮದ ಸರ್ವೆ 12ನೆ ನಂಬರಿನಲ್ಲಿಯೂ ಆಗ್ನೇಯಕ್ಕೂ ಪೂರ್ವಕ್ಕೂ ಕಲ್ಲುಗುಂಡಿ ಗ್ರಾಮದ ಸರ್ವೆ 62ನೆ ನಂಬರಿನಲ್ಲಿಯೂ ಸುಮಾರು 139 ಸರಪಣಿಗಳ ದೂರ ಹೋಗುತ್ತದೆ. ಪೂರ್ವಕ್ಕೆ.—ಅಲ್ಲಿಂದ ದಕ್ಷಿಣಕ್ಕೆ ಕಲ್ಲುಗುಂಡಿ ಗ್ರಾಮದ ಸರ್ವೆ 62ನೆ ನಂಬರಿನಲ್ಲಿ ಸುಮಾರು 21 ಸರಪಣಿಗಳ ದೂರ ಗೊಲ್ಲರಹಳ್ಳಿ ಗ್ರಾಮದ ಸರ್ವೆ 45ನೆ ನಂಬರಿನ ಅತ್ಯಂತ ಪಶ್ಚಿಮ ಮೂಲೆಗೆ ಹೋಗುತ್ತದೆ; ಅಲ್ಲಿಂದ ಕಲ್ಲುಗುಂಡಿ ಮತ್ತು ಗೊಲ್ಲರಹಳ್ಳಿ ಗ್ರಾಮಗಳ ಎಲ್ಲೆಯಲ್ಲಿ ಕಲ್ಲುಗುಂಡಿ, ಗೊಲ್ಲರಹಳ್ಳಿ ಮತ್ತು ನರಸೀಪುರ ಗ್ರಾಮಗಳ ಮುಕ್ಕುಪ್ಪೆಗೆ ಹೋಗುತ್ತದೆ; ಅಲ್ಲಿಂದ ಪೂರ್ವಕ್ಕೆ ನರಸೀಪುರ ಗ್ರಾಮದ ಸರ್ವೆ 62ನೆ ನಂಬರಿನಲ್ಲಿ ಸುಮಾರು 79 ಸರಪಣಿಗಳ ದೂರ ಸರ್ವೆ 58ನೆ ನಂಬರಿನ ನೈರುತ್ಯ ಮೂಲೆಗೆ ಹೋಗಿ, ಅಲ್ಲಿಂದ ದಕ್ಷಿಣಕ್ಕೆ ನರಸೀಪುರ ಮತ್ತು ಜನ್ನಾವರ ಗ್ರಾಮಗಳ ಮಧ್ಯೆ ಎಲ್ಲೆಯಲ್ಲಿ ಮುಂಜೆ ಹೇಳಿದ ಗ್ರಾಮಗಳ ಮತ್ತು ಹಿರಿಕಲ್ಲುಗುಡ್ಡ ಸ್ವೇಟ್ ಫಾರೆಸ್ಟಿನ ಮುಕ್ಕುಪ್ಪೆಗೆ ಹೋಗುತ್ತದೆ; ಅಲ್ಲಿಂದ ಪಶ್ಚಿಮಕ್ಕೆ ನರಸೀಪುರ ಮತ್ತು ಹಿರಿಕಲ್ಲುಗುಡ್ಡ ಸ್ವೇಟ್ ಫಾರೆಸ್ಟಿನ ಎಲ್ಲೆಯಲ್ಲಿ ನರಸೀಪುರ, ಹಿರಿಕಲ್ಲುಗುಡ್ಡ ಸ್ವೇಟ್ ಫಾರೆಸ್ಟ್ ಮತ್ತು ಮರಟಗೆರೆ ಗ್ರಾಮಗಳ ಮುಕ್ಕುಪ್ಪೆಗೆ ಹೋಗುತ್ತದೆ; ಅಲ್ಲಿಂದ ದಕ್ಷಿ